ನಿರಾಳವಾಗಿಬಿಡುತ್ತಿತ್ತು.

ಆದರೆ ಈಗ ಬಂದ ಗಾಳಿ ಸುಮ್ಮನೇ ಬರಲಿಲ್ಲ. ದೊಡ್ಡ ದೊಡ್ಡ ಮೋಡಗಳನ್ನು ಹೊತ್ತು ತಂದಿತ್ತು. ಆ ದಟ್ಟ, ಕಪ್ಪು ಮೋಡಗಳೋ ಕಲ್ಲಿನಷ್ಟೇ ಬಿರುಸಾಗಿದ್ದ ಆಲಿಕಲ್ಲುಗಳನ್ನು ಬಳಬಳನೆ ಉದುರಿಸುತ್ತಿದ್ದವು. ಯಾರೋ ಮಳೆಯ ನೀರಿನ ಹನಿಗಳ ಬದಲು ಹಿಡಿಗಾತ್ರದ ಕಲ್ಲುಗಳನ್ನೇ ಆಕಾಶದಿಂದ ತೂರುತ್ತಿರುವಂತೆ ಭಾಸವಾಗುತ್ತಿತ್ತು. ಅವುಗಳಲ್ಲಿ ಮೊಳೆಯ ಗಾತ್ರದ ಕಲ್ಲುಗಳಿಂದ ಆರಂಭಿಸಿ ಕುಂಬಳಕಾಯಿಯ ಗಾತ್ರದವರೆಗಿನ ಕಲ್ಲುಗಳೂ ಇದ್ದವು. ಆ ರಣಮಳೆಯ ಬಿರುಸಿಗೆ ನನ್ನ ಎಲೆಗಳು ಚೂರುಚೂರಾಗಿ ನೆಲಕ್ಕೆ ಬಿದ್ದು ಅಪ್ಪಚ್ಚಿಯಾದವು. ಸಣ್ಣ ಸಣ್ಣ ಹರೆಗಳೂ ಮುರಿದು ಮಣ್ಣುಪಾಲಾದವು. ಈ ಹೊಡೆತವನ್ನು ನಾನಾದರೂ ಹೇಗಾದರೂ ಸಹಿಸಿಕೊಳ್ಳಬಲ್ಲೆನಾಗಿದ್ದೆ. ಆದರೆ ಆ ಜನ, ಪ್ರಾಣಿ, ಪಕ್ಷಿಗಳು, ಕ್ರಿಮಿ, ಕೀಟಗಳು? ಮನೆ ಮೇಲಿನ ಹೆಂಚುಗಳೆಲ್ಲ ಪುಡಿಪುಡಿಯಾಗಿ ಮರದ ತೀರುಗಳು, ಮರಗಳಗಳು ಅಸ್ಥಿಪಂಜರದಂತೆ ಕಾಣುತ್ತಿದ್ದವು. ತಗಡಿನ, ಸೊಪ್ಪಿನ ಸೂರುಗಳಂತೂ ಹಾರಿಹೋಗಿ ಬಟಾಬಯಲಾಗಿದ್ದವು. ಇನ್ನು ಆರ್.ಸಿ.ಸಿ. ಮನೆಗಳ ಮೇಲಿನ ಸೋಲಾರ್ ಪ್ಯಾನೆಲ್‌ಗಳು, ನೀರಿನ ಟ್ಯಾಂಕರ್‌ಗಳಂತೂ ನಲ್ಲಿಗೋ ಮತ್ತೊಂದಕ್ಕೋ ಸಿಕ್ಕಿಹಾಕಿಕೊಂಡು ಜೋತಾಡುತ್ತಿದ್ದವು, ಇಲ್ಲವೇ ಹಾರಿ ಹೋಗಿ ಯಾರುಯಾರದೋ ಮನೆಯ ಮೇಲೆ, ರಸ್ತೆಚರಂಡಿಗಳ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಎಷ್ಟೋ ಜನಕ್ಕೆ ನೆಲವೇ ಹಾಸಿಗೆ, ಆಕಾಶವೇ ಹೊದಿಕೆ ಎಂಬಂತಾಗಿಹೋಗಿತ್ತು. ಆದರೆ ಆ ಆಕಾಶವೆಂಬುದಾದರೂ ಹೀಗೆ ರುದ್ರ ರಮಣೀಯವಾಗಿದ್ದರೆ ಭೂಮಿ ಮೇಲಿನ ಜೀವ ಸಂಕುಲವಾದರೂ ಉಳಿದೀತು ಹೇಗೆ? ಅದ್ಯಾವ ಕೇಡಿಗೆ ಮಳೆಗಾಳಿ ಹೀಗೆ ಜುಗಲ್‌ಬಂದಿ ಹಾಡುತ್ತಾ ಸುರಿಯುತ್ತಿತ್ತೋ ಕಾಣೆ. ಅದೇನು ನನ್ನ ಅವಸಾನವನ್ನು ಸಂಭ್ರಮಿಸಲು ಬಂದಿತ್ತೋ, ಇಲ್ಲವೇ ದುರ್ಜನರ ಕೈಯಿಂದ ನಾನು ನಿರ್ನಾಮವಾದೆನೆಂಬ ಅಪಖ್ಯಾತಿಯನ್ನು ತಪ್ಪಿಸಲು ಬಂದಿತ್ತೋ ಗೊತ್ತಿಲ್ಲ. ಅಥವಾ ನನ್ನಂಥ ಮರಗಿಡಗಳನ್ನು ಹೀಗೇ ಕಡಿಯುತ್ತಾ ಹೋದರೆ ಮುಂದೆ ನಿಮಗೆ ಇದೇ ಗತಿ ಎಂದು ಜನರಿಗೆ ಸಾಂಕೇತಿಕವಾಗಿ ಸೂಚಿಸಲೂ ಬಂದಿರಬಹುದು. ಆದರೆ ಇಂಥ ಸಂಕೇತಗಳನ್ನೆಲ್ಲ ಗ್ರಹಿಸುವಂಥ ಸೂಕ್ಷ್ಮತೆಯನ್ನಾದರೂ ಪಾಪ ಅವರೆಲ್ಲಿ ಉಳಿಸಿಕೊಂಡಿದ್ದಾರೆ?.

ನನ್ನ ಬುಡದವರೆಗೆ ಇಳಿಜಾರಾಗಿ ಅಗೆದಿದ್ದ ಮಣ್ಣಿನ ಜಾಗದುದ್ದಕ್ಕೂ ನೀರು ಕ್ಷಣಾರ್ಧದಲ್ಲಿ ತುಂಬಿಕೊಂಡುಬಿಟ್ಟಿತು. ಅದರ ಜೌಗು ಅಲುಗಾಡಿದ್ದ ನನ್ನ ಬೇರಿನುದ್ದಕ್ಕೂ ಜೋಪಿಸಿಕೊಂಡು, ಅಂತರಂಗದ ಮಣ್ಣನ್ನೆಲ್ಲ ಕೆಸರು ಮಾಡಿತ್ತು. ಮತ್ತೆ ಮತ್ತೆ ಬಿಟ್ಟು ಬಿಟ್ಟು ಬೀಸುತ್ತಿದ್ದ ಗಾಳಿಯ ವೇಗಕ್ಕೆ ನನ್ನ ಇಡೀ ಮೈ ಅಲುಗಾಡಲಾರಂಭಿಸಿತ್ತು. ಅದಕ್ಕೆ ಬೇಕಾದ ಬಿಗಿಹಿಡಿತ ನನಗೆ ಭೂಮಿಯೊಳಗೆ ಸಿಗದೇ ವಾಲಾಡುತ್ತ, ಯಾವ ಕ್ಷಣದಲ್ಲಾದರೂ ನಾನು ಬಿದ್ದುಬಿಡಬಹುದಾಗಿತ್ತು. ಮೇಲಿನ ಅಷ್ಟೂ ಭಾರಕ್ಕೆ ಅಗತ್ಯವಾದ ಆಧಾರ ಭೂಮಿಯೊಳಗೆ ಇಲ್ಲವಾದರೆ ನಿಲ್ಲುವುದಾದರೂ ಹೇಗೆ? ನಾನೋ ಮುಂಭಾರಹಿಂಭಾರವಾದಾಗ ವಾಲಾಡುವ ಗಾಡಿಯಂತೆ ಹಿಂದಕ್ಕೂ ಮುಂದಕ್ಕೂ ಜೋತಾಡುತ್ತಿದ್ದೆ. ಹಾಗೆ ಆಡುತ್ತಿದ್ದುದರಿಂದಲೇ ಬೇರುಗಳು ಬೆಣೆಯನ್ನು ಅಲ್ಲಾಡಿಸಿದಂತೆ ಅಲ್ಲಾಡಿ ಅಲ್ಲಾಡಿ ಇನ್ನಷ್ಟು ಸಡಿಲಗೊಂಡವು. ಅದರ ಸಂದಿಗೆ ಇನ್ನಷ್ಟು ನೀರು ಸೇರಿಕೊಂಡು ಕೆಸರಿನ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುತ್ತಲಿತ್ತು. ನಾನು ನಿರ್ಧರಿಸಿಬಿಟ್ಟೆ. ಇನ್ನೂ ನನ್ನಿಂದ ನನ್ನ ಮೇಲ್ಬಾರವನ್ನು ಹೊರಲಾಗುವುದಿಲ್ಲ, ಭೂಮಿಯ ಆಸರೆಯನ್ನು ಪಡೆದುಕೊಳ್ಳಲೇಬೇಕೆಂದು. ಆಗ ಅನ್ನಿಸಿದ್ದು, ನನ್ನ ಪ್ರಭಾವವನ್ನು ಬಳಸಿ ಜನರನ್ನು ಸ್ಟ್ರೈಕ್ ಮಾಡಲು ಪ್ರಚೋದಿಸದೇ, ನನ್ನ ರೆಂಬೆ ಕೊಂಬೆಗಳನ್ನು ಕಡಿಯಲು ಬಿಟ್ಟಿದ್ದರೆ ಬಹುಶಃ ನಾನು ಹೀಗೆ ನೆಲವನ್ನಾಶ್ರಯಿಸುವ ಪ್ರಮೇಯವೇ ಬೀಳುತ್ತಿರಲಿಲ್ಲವೆಂದು. ಅದೇನೋ ಗಾದೆ ಹೇಳುತ್ತಾರಲ್ಲ, ಮೋಟು ಮರ ಗಾಳಿಗೆ ಮಿಂಡ ಅಂತ. ಹಾಗೆ ಇಂಥ ಗಾಳಿ ಏನು, ಇದರಪ್ಪನಂಥ ಗಾಳಿ ಬಂದಿದ್ದರೂ ಕೂಡ ನನ್ನನ್ನು ಏನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಒಮ್ಮೊಮ್ಮೆ ಅನಿಸುತ್ತಿತ್ತು: ಬದುಕಿದ್ದ ವ್ಯಕ್ತಿಗೆ ಕೈಕಾಲು ಕತ್ತರಿಸಿದಂತೆ ರೆಂಬೆ ಕೊಂಬೆಗಳನ್ನು ಕತ್ತರಿಸಿದರೆ ಆಗಬಹುದಾದ ನೋವಿಗಿಂತ ಹೀಗೆ ಒಮ್ಮೆಲೇ ಸಾಯುವುದೇ ಸುಖವೆಂದು.

ಈ ರಣಭಯಂಕರ ಮಳೆ, ಗಾಳಿ ಇನ್ನೂ ಎರಡು ಮೂರು ದಿನ ನಿಲ್ಲುವ ಯಾವ ಲಕ್ಷಣಗಳೂ ಕಾಣಲಿಲ್ಲ. ಸಮುದ್ರದ ಮೇಲಿನಿಂದ ಅಪ್ಪಳಿಸುತ್ತಿದ್ದ ಚಂಡಮಾರುತ ಇನ್ನೂ ಕರಾವಳಿಯನ್ನು ಅಪ್ಪಳಿಸುತ್ತಲೇ ಇತ್ತು. ಅಲ್ಲಿಂದ ಸುಮಾರು ಮೂರು ಗಂಟೆಯ ಪ್ರಯಾಣ ಅದಕ್ಕೆ, ನನ್ನ ಬಳಿಗೆ ಬರುವುದಕ್ಕೆ.

ಭದ್ರವಾಗಿರದ ಬೇರುಗಳಿಂದ ಇನ್ನೂ ನನ್ನ ಭಾರವನ್ನು ಹೊರಲು ಸಾಧ್ಯವೇ ಇಲ್ಲದಂತಾಗಿ ಹೋಗಿತ್ತು. ಆಗ ಅಪ್ಪಳಿಸುತ್ತಿದ್ದ ಯಾವುದಾದರೂ ಒಂದು ಬಿರುಸಾದ ಗಾಳಿಗೆ ಸುಮ್ಮನೇ ನೆಲದತ್ತ ವಾಲುವುದನ್ನು ಬಿಟ್ಟರೆ ಬೇರೆ ದಾರಿಯೇ ಇರಲಿಲ್ಲ. ಆಗ ಮಧ್ಯರಾತ್ರಿ ಹನ್ನೆರಡು ಗಂಟೆ. ಅಪಾಯದ ಮುನ್ಸೂಚನೆಯಂತೆ ಕರೆಂಟನ್ನು ತೆಗೆದಿದ್ದರಿಂದ ಕಾರ್ಗತ್ತಲು ಸುತ್ತಲೂ ಆವರಿಸಿತ್ತು. ನಾನಾದರೂ ಏಕಾಂಗಿ ಎಂದು, ಎಂದೂ ಅನ್ನಿಸದಿದ್ದುದು ಇಂದು ಅನ್ನಿಸಲಾರಂಭಿಸಿತು. ಸಾಯುವ ಗಳಿಗೆ ಬಂದಾಗ ಎಲ್ಲರೂ ಏಕಾಂಗಿಗಳೇ ತಾನೇ?.

ನನ್ನಿಂದಾಗಿ ಯಾವ ಕಟ್ಟಡಗಳಿಗೂ ಹಾನಿಯಾಗಬಾರದು, ಯಾವ ಪ್ರಾಣಿಪಕ್ಷಿಗಳೂ, ಮನುಷ್ಯರೂ ನನ್ನಿಂದ ಸಾಯಬಾರದೆಂಬುದು ನನ್ನ ಆಶಯವಾಗಿತ್ತು. ಇಷ್ಟು ವರ್ಷ ನನ್ನಿಂದಾಗಿ ಒಂದು ಜೀವಿಯೂ ಸಾಯದಿರುವಾಗ ಕೊನೆಗಾಲದಲ್ಲಿ ಯಾಕೆ, ಸಾಯುವಾಗ ನೊಣ ತಿಂದು ಜಾತಿ ಕೆಡಿಸಿಕೊಂಡ ಎಂಬಂತಾಗಬೇಕೆಂದು ಭಾವಿಸಿ, ಗಾಳಿಯ ತುಯ್ದಾಟವನ್ನು ಸಂಭಾಳಿಸಿಕೊಂಡು, ರಸ್ತೆಯುದ್ದಕ್ಕೂ ಇದ್ದ ಬಟಾಬಯಲು ಜಾಗವನ್ನೇ ಆರಿಸಿಕೊಂಡು ದೊಪ್ಪನೆ ಬಿದ್ದೆ.

ನಾನು ಹಾಗೆ ಬಿದ್ದ ಸದ್ದು ಇಡೀ ಊರಿಗೆ ಯಾವುದೋ ಬರಸಿಡಿಲು ಬಡಿದಂತೆ, ತಮ್ಮ ತಲೆಯ ಮೇಲೆಯೇ ಅಪ್ಪಳಿಸಿತೆನ್ನುವಷ್ಟು ಭೀಭತ್ಸವಾಗಿತ್ತು. ನನ್ನ ಎಂಟು ಕೊಂಬೆಗಳೂ, ಉಪಕೊಂಬೆಗಳೂ ಎಲ್ಲಿ ಬೇಕೋ ಅಲ್ಲಲ್ಲಿ, ಲಟಲಟನೆಂದು ಮುರಿದುಕೊಂಡುಬಿಟ್ಟವು. ಸಿಡಿಲಿನ ನಂತರದ ಗುಡುಗಿನಂತೆ ಅದರ ಸದ್ದೂ ಕೆಲ ಸೆಕೆಂಡುಗಳ ಕಾಲ ಮುಂದುವರೆದಿತ್ತು. ಅಣುಬಾಂಬು ಬಿದ್ದಾಗ ಇಡೀ ಜಪಾನು ತತ್ತರಿಸಿ ಹೋದಂತೆ, ನಾನು ಬಿದ್ದಾಗಲೂ ಊರಿಗೆ ಊರೇ ಒಂದು ಕ್ಷಣ ನಡುಗಿಹೋಗಿ ಸ್ತಬ್ಧವಾಯಿತು. ಆದರೆ ನೆಟ್ಟ ನೇರ ಆಳಕ್ಕೆ ಹೋಗಿದ್ದ ತಾಯಿಬೇರು ಮಾತ್ರ ಇನ್ನೂ ತಾಯಿ ಕರುಳಿನ ಹೊಕ್ಕಳುಬಳ್ಳಿಯಂತೆ ಅಂಟಿಕೊಂಡೇ ಇತ್ತು. ಅದರ ಮೂಲಕ ನನಗಿನ್ನೂ ಅಲ್ಪ ಪ್ರಮಾಣದ ಆಹಾರ, ನೀರು ಪೂರೈಕೆಯಾಗುತ್ತಲೇ ಇತ್ತು... ನನಗೆ ಅಂಟಿಕೊಂಡು ನನ್ನೊಳಗೇ ಇದ್ದಂತಿದ್ದ ಬೇವಿನಮರದ ಬೇರುಗಳು ಮಾತ್ರ ನನ್ನ ಬಿರುಸಾದ ಎಳೆತಕ್ಕೆ ಸಿಕ್ಕು ಕತ್ತರಿಸಿ ಬಿದ್ದ ವಿದ್ಯುತ್ ತಂತಿಯಂತೆ ಅಸ್ತವ್ಯಸ್ತವಾಗಿ ಅತ್ತಿತ್ತ ನಿಗಿತುಕೊಂಡು ನಿಂತಿದ್ದವು. ನನ್ನಿಂದಾಗಿ ಇಷ್ಟು ದಿನ ನನ್ನ ಹೆಂಡತಿಯಂತೇ ಬದುಕಿದ್ದ ಆಕೆಯನ್ನು ನಾನೇ ಸಾಯಿಸಿಬಿಟ್ಟೆ! ಆದಾಗ್ಯೂ ನಾನು ಆಕೆಯ ಮೇಲೆ ಬೀಳದೇ, ನನ್ನ ಮೇಲೆಯೇ ಆಕೆಯನ್ನು ಬೀಳಿಸಿಕೊಂಡಿದ್ದೆ. ಇಂಥ ಸಂದರ್ಭದಲ್ಲಿ ಅಷ್ಟಕ್ಕಿಂತ ಇನ್ನೇನು ತಾನೇ ನಾನು ಮಾಡಬಹುದಾಗಿತ್ತು.

ಕೊಂಬೆ–15

ಬೆಳಗ್ಗೆ ಸಮುದ್ರದಂತೆ ಊರನ್ನೆಲ್ಲ ಆವರಿಸಿದ್ದ ನೀರಿನಲ್ಲೇ ಜನರು ಅವರವರ ಮನೆಯ ಮೇಲಿಂದ, ಹೋಟೆಲು ಕಟ್ಟಡಗಳ ಮೇಲಿಂದ ನಿಂತು ನನ್ನ ವಿಧವಿಧವಾದ ಫೋಟೋ ವಿಡಿಯೊಗಳನ್ನು ತೆಗೆದುಕೊಳ್ಳುತ್ತಿದ್ದರು. ಯಾರಾದರೂ ಅಪಘಾತವೋ ಮತ್ತೊಂದೋ ಆಗಿ ನರಳಾಡುತ್ತಿದ್ದರೂ ತಮ್ಮ ಮೊಬೈಲಿನಲ್ಲಿ ಎಷ್ಟೊಂದು ಸುಂದರವಾಗಿ ನರಳುತ್ತಿದ್ದಾನಲ್ಲ ಎಂದು ಚಿತ್ರೀಕರಿಸಿ ಸೋಷಿಯಲ್ ಮೀಡಿಯಾದಲ್ಲಿ ಅಪ್‌ಲೋಡ್ ಮಾಡುವಂಥ ಅಮಾನವೀಯ ಕಾಲ ಇದಾಗಿರುವಾಗ ನಾನಾದರೂ ಇನ್ನೆಂಥ ಕರುಣೆಯನ್ನು ಇವರಿಂದ ನಿರೀಕ್ಷಿಸಬಹುದು. ಬಹುಪಾಲು ಬದುಕಿಗೆ ಬೆಳಕನ್ನು ನೀಡಲು ಬಂದ ಏಸುಕ್ರಿಸ್ತ, ಪೈಗಂಬರ, ಬಸವಣ್ಣರಂಥ ಸಂತರನ್ನೂ ಕೊಂದೋ, ಇಲ್ಲವೇ ಪ್ರಾಣಭಯದಿಂದ ಓಡಿಹೋಗುವಂತೆಯೋ ಮಾಡಿದ ಅದೇ ಸಮಾಜದ ಪಳೆಯುಳಿಕೆಗಳಾದ ಈ ಕೀಚಕರು ಮಾತ್ರ ನನ್ನನ್ನು ಸಾವಿನಲ್ಲೂ ಸಾರ್ಥಕ್ಯ ಮೆರೆದ ಸಂತನೆಂಬಂತೆ ಬಿಂಬಿಸುತ್ತಿದ್ದರು. ಡ್ರೋಣ್ ಕ್ಯಾಮೆರಾದಿಂದ ನನ್ನ ವಿವಿಧ ಭಂಗಿಗಳ ಚಿತ್ರಗಳನ್ನು, ವಿಡಿಯೋವನ್ನು ಚಿತ್ರೀಕರಿಸುತ್ತಿದ್ದ ನ್ಯೂಸ್ ಚಾನಲ್ ಒಂದು ಇಂಥ ಚಿತ್ರಗಳು 'ತನ್ನಲ್ಲೇ ಮೊದಲು' ಎಂಬ ಉಪಶೀರ್ಷಿಕೆಯೊಂದಿಗೆ ಪ್ರಸಾರ ಮಾಡುತ್ತಿತ್ತು.

(ಸಶೇಷ)